ಗುಜರಾತಿ ಭಾಷೆಯ ಲೇಖಕ ದಿಲೀಪ್ ರಾಣ್‌ಪುರ 1931ರಲ್ಲಿ ಜನಿಸಿದರು. ಗುಜರಾತಿ ಭಾಷೆಯ ಪ್ರತಿಷ್ಠಿತ ಲೇಖಕರಾಗಿ ಮನೆಮಾತಾಗಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಆದರೆ ಸಾಹಿತ್ಯ ಲೋಕ ಅವರಿಗೆ ಬಹಳ ಇಷ್ಟವಾಗಿತ್ತು. ಅವರ 61 ಪುಸ್ತಕಗಳು ಪ್ರಕಟವಾಗಿವೆ. ಇವರ 'ಘರ್ ಥಿ ಘರ್' ಕೃತಿ ತುಂಬಾ ಜನಪ್ರಿಯವಾಗಿದೆ. 'ಮೀರಾನಿ ರಾಹಿ ಮಹೋಕ್', 'ಸುಖ್ ನು ನಾಮ್', 'ಆಂಸೂ ಭೀನೋ ಉಜಾಸ್' ಕೃತಿಗಳು ಸಹ ಗುಜರಾತಿ ಭಾಷೆಯ ಶ್ರೇಷ್ಠ ಕೃತಿಗಳೆಂದು ಮನ್ನಣೆ ಪಡೆದಿವೆ. ಅನೇಕ ಪುರಸ್ಕಾರಗಳು ಮತ್ತು ಗುಜರಾತ್ ಸಾಹಿತ್ಯ ಅಕಾಡೆಮಿಗಳ ಪುರಸ್ಕಾರಗಳು ಅವರಿಗೆ ದೊರೆತಿವೆ. ಅವರು 2003ರಲ್ಲಿ ನಿಧನರಾದರು.

'ಈಗ್ಲೇ ತರ್ತೀನಿ, ಸಾರ್...' ಹೀಗೆಂದು ಮೇಸ್ಟ್ರು ಹೊರಟರು.

ಸ್ವಲ್ಪ ಸಮಯದ ನಂತರ ಬಂದರು. ಇಬ್ಬರೂ ಜೊತೆಯಲ್ಲಿ ಮನೆಗೆ ಹೋದರು. ಜೊತೆಯಲ್ಲಿಯೇ ತಿಂಡಿ ತಿಂದರು.

ಸಂಜೆ ಲಾಮೂ ಭಾಯಿ ಮರಳಿ ಹೋಗುವಾಗ, ಮೇಸ್ಟ್ರು ಅವರೊಂದಿಗೆ ಸ್ವಲ್ಪ ದೂರ ಹೋದರು. ಅವರು ಮರಳಿ ಹೋಗಬೇಕೆಂದಿದ್ದಾಗ, ಲಾಮೂ ಭಾಯಿ ಅವರ ಹೆಗಲ ಮೇಲೆ ಕೈಯಿಟ್ಟು ಹೇಳುತ್ತಾರೆ, 'ಬಸಂತ್ ಭಾಯಿ, ಒಂದು ಮಾತು ಹೇಳಬೇಕೆಂದು ಅನ್ನಿಸುತ್ತಿದೆ.'

'ಹೇಳಿ.'

'ತಪ್ಪು ತಿಳಿಯಲ್ಲ ತಾನೇ?'

'ಇಲ್ಲ, ಹೇಳಿ.'

'ನಿಮ್ಮ ಶಾಲೆ ನೋಡಿ ನನಗೆ ತುಂಬಾ ಸಂತೋಷವಾಯಿತು. ನಾನು ಈ ಕ್ಷೇತ್ರದ ಅನೇಕ ಶಾಲೆಗಳನ್ನು ನೋಡಿದ್ದೇನೆ. ಆದರೆ ನಾನು ಈ ಶಾಲೆಯಲ್ಲಿ ಒಂದು ವಿಶೇಷತೆಯನ್ನು ನೋಡಿದೆ..' ಹೀಗೆಂದು ಅವರು ಮೇಸ್ಟ್ರ ಕಣ್ಣುಗಳನ್ನು ನೋಡಿದರು. ಅವರ ಕಣ್ಣುಗಳಲ್ಲಿ ಹಿಂದಿನ ಒರಟುತನವೇ ಕಂಡಿತು.

'ನಿಮ್ಮ ಶಾಲೆಯ ಮಕ್ಕಳು ನಿಮ್ಮ ಅನುಪಸ್ಥಿತಿಯಲ್ಲಿಯೂ ಬುದ್ಧಿವಂತರಾಗಿ ಕಾಣಿಸುತ್ತಾರೆ..'

ಮೇಷ್ಟ್ರಿಗೆ ಸಂತೋಷವಾಯಿತು.

'ಆದರೆ ನನ್ನದೊಂದು ವಿನಂತಿಯಿದೆ. ನೀವು ಇವರ ಬರವಣಿಗೆಯಲ್ಲಿ ಸುಧಾರಣೆ ಮಾಡಿ...ನಾವು ಬೇರೇನೂ ಮಾಡಬೇಕಿಲ್ಲ. ಸುಧಾರಣೆ ಮಾಡ್ತಿರಲ್ಲ?'

'ಖಂಡಿತಾ ಮಾಡ್ತೀನಿ, ಸಾರ್!' ಮೇಸ್ಟ್ರು ಉತ್ಸಾಹದಿಂದ ಹೇಳಿದರು.

ಲಾಮೂ ಭಾಯಿ ಅವರ ಬೆನ್ನನ್ನು ತಟ್ಟಿದರು. ಅವರ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿ ಸ್ನೇಹದಿಂದ ಹೇಳಿದರು, 'ನೀವು ಇಷ್ಟನ್ನು ಮಾತ್ರ ಮಾಡಿ ತೋರಿಸಿ...ನನಗೆ ನಿಮ್ಮ ಮೇಲೆ ನಂಬಿಕೆಯಿದೆ...'

ಒಂದು ತಿಂಗಳ ನಂತರ ಲಾಮೂ ಭಾಯಿ ಬಂದರು.

ಶಾಲೆಯ ಸ್ಥಿತಿ ಈ ಹಿಂದಿನಂತೆಯೇ ಇತ್ತು. ಮೇಸ್ಟ್ರು ತರಗತಿಯಲ್ಲಿದ್ದರು, ಅವರು ತಮ್ಮ ಕಾಲುಗಳನ್ನು ಮೇಜಿನ ಮೇಲಿಟ್ಟುಕೊಂಡು, ಕುರ್ಚಿಯಲ್ಲಿ ಕೂತಿದ್ದರು. ಮೇಸ್ಟ್ರು, ಲಾಮೂ ಭಾಯಿಯವರನ್ನು ನೋಡಿ ಸಂಕೋಚಕ್ಕೊಳಗಾದರು.

ಲಾಮೂ ಭಾಯಿ ಅದನ್ನು ಗಮನಿಸಿಯೂ, ಗಮನಿಸದಂತಿದ್ದರು.

ಮಕ್ಕಳ ಬರವಣಿಗೆಯಲ್ಲಿ ಸಾಕಷ್ಟು ಸುಧಾರಣೆಯಾಗಿತ್ತು.

'ನೀವು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದೀರ.'

ಮೇಸ್ಟ್ರು ತಮ್ಮ ಪ್ರಶಂಸೆಯನ್ನು ಕೇಳಿ ಸಂಕೋಚದಿಂದ ತಲೆ ತಗ್ಗಿಸಿದರು.

'ನೀವು ಇಷ್ಟು ಕಡಿಮೆ ಸಮಯದಲ್ಲಿ ಶಾಲೆಯ ಆಕಾರವನ್ನೇ ಬದಲಿಸಿದ್ದೀರ...'

ಮೇಸ್ಟ್ರು ಮೌನವಾಗಿದ್ದರು.

'ನೀವೇಕೆ ಮಾತಾಡಲ್ಲ?'

'ಸಾರ್, ನಾನೇನೂ ಹೇಳಲ್ಲ, ಹೇಳಲಾರೆ.' ಅವರ ಧ್ವನಿಯಲ್ಲಿ ನೋವಿತ್ತು.

'ಏಕೆ?'

'ನನಗೆ ನನ್ನ ಕುಟುಂಬದ ನೆನಪು ಕಾಡಿಸುತ್ತದೆ.'

'ಅವರ ಬಳಿಗೆ ಹೋಗಿ...ಎಲ್ಲರಿಗೂ ಕುಟುಂಬದ ನೆನಪಾಗುತ್ತದೆ...ನನಗೂ ನೆನಪಾಗುತ್ತದೆ. ನಾವ್ಯಾರೂ ಸನ್ಯಾಸಿಗಳಲ್ಲ.'

'ಆದ್ರೆ ಸಾರ್...' ಮೇಸ್ಟ್ರು ಮತ್ತೆ ಮೌನ ವಹಿಸಿದರು.